# ಲೇಡಿ ಜಹೀರ್ ಖಾನ್!



■ ಪ್ರವೀಣ ಕುಲಕರ್ಣಿ

ಕೆಲವೇ ದಿನಗಳ ಹಿಂದಿನ ಮಾತು. ರಾಜಸ್ಥಾನದ ಈ ಪುಟ್ಟ ಬಾಲಕಿ ತನ್ನ ಶಾಲೆಯ ಮೈದಾನದಲ್ಲಿ ತನ್ನ ಪಾಡಿಗೆ ತಾನು ಆಡಿಕೊಂಡಿದ್ದಳು. ಆದರೆ, ಹನ್ನೆರಡರ ಹರೆಯದ ಈ ಕಿಶೋರಿ ಬೌಲ್ ಮಾಡುವ ದೃಶ್ಯವನ್ನು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದೇ ತಡ, ದೊಡ್ಡ ಸೆಲೆಬ್ರಿಟಿ ಆಗಿಬಿಟ್ಟಿದ್ದಾಳೆ. ಕೇಂದ್ರ ಕ್ರೀಡಾ ಸಚಿವರು, ರಾಜಸ್ಥಾನದ ಉಪಮುಖ್ಯಮಂತ್ರಿ, ಕ್ರಿಕೆಟ್ ಕ್ಲಬ್‌ಗಳ ಮುಖ್ಯಸ್ಥರು – ಹೀಗೆ ಹಲವರು ಈ ಬಾಲಕಿಗೆ ಕರೆ ಮಾಡಿ, ಮಾತನಾಡುತ್ತಿದ್ದಾರೆ. ದೊಡ್ಡ ತಾರೆಯೊಬ್ಬರೊಂದಿಗೆ ಮಾತನಾಡಿದಂತೆ ಸಂಭ್ರಮಿಸುತ್ತಿದ್ದಾರೆ.

ಬರಿಗಾಲಿನಲ್ಲಿ ಓಡಿ ಬಂದು ಎಡಗೈ ವೇಗದ ಬೌಲಿಂಗ್ ಮಾಡುವ ಈ ಹುಡುಗಿಯ ಶೈಲಿಗೆ ಸ್ವತಃ ಸಚಿನ್ ಫಿದಾ ಆಗಿದ್ದಾರೆ ಎಂದಮೇಲೆ ಕೇಳಬೇಕೆ? ಸುಶೀಲಾಳ ಆಟದ ದೃಶ್ಯದ ತುಣುಕುಗಳನ್ನು ಲಕ್ಷ, ಲಕ್ಷ ನೆಟ್ಟಿಗರು ಪರಸ್ಪರ ಹಂಚಿಕೊಂಡಿದ್ದಾರೆ. ಥೇಟ್ ಜಹೀರ್ ಖಾನ್ ಅವರಂತೆಯೇ ಬೌಲ್ ಮಾಡುತ್ತಾರೆ ಎಂಬ ಸಚಿನ್ ಹೇಳಿಕೆಯನ್ನೂ ಅನುಮೋದಿಸಿದ್ದಾರೆ. ಈ ಗ್ರಾಮೀಣ ಪ್ರತಿಭೆಯ ಸಹಜ, ಸರಾಗ ಮತ್ತು ಸುಂದರ ಶೈಲಿಗೆ ಪ್ರಧಾನಿ ಕೂಡ ಮರುಳಾಗಿದ್ದಾರೆ.

ರಾಜಸ್ಥಾನದ ಪ್ರತಾಪಗಢ ಜಿಲ್ಲೆಯ ಧರಿಯಾವಾಡದ ಸುಶೀಲಾಳ ಕುಟುಂಬ ವಾಸವಾಗಿರುವ ಜೋಪಡಿ ಈಗ ಶೂಟಿಂಗ್ ತಾಣವಾಗಿದೆ. ರಾಷ್ಟ್ರೀಯ ಟೀವಿ ವಾಹಿನಿಗಳು ಸರದಿಯಲ್ಲಿ ನಿಂತು, ಈ ಹುಡುಗಿಯ ಸಂದರ್ಶನ ಮಾಡುತ್ತಿವೆ. ಈ ಬಾಲಕಿಯ ಕೀರ್ತಿಪತಾಕೆ ಎಲ್ಲಿಯವರೆಗೆ ಹಬ್ಬಿದೆ ಎಂದರೆ ಬಿಬಿಸಿ ಕೂಡ ಅವಳ ಕುರಿತು ಒಂದು ಸಾಕ್ಷ್ಯಚಿತ್ರ ಮಾಡಿದೆ. ಸುದೀರ್ಘ ಲೇಖನವನ್ನೂ ಬರೆದಿದೆ. ಅವಳ ಬೌಲಿಂಗ್ ಶೈಲಿಯನ್ನು ನೋಡಿದವರೆಲ್ಲ ನಿಖರ ಎಸೆತ, ಮನಮೋಹಕ ಸ್ವಿಂಗ್ ಮತ್ತು ವೇಗದ ಏರಿಳಿತದ ಕೌಶಲವನ್ನು ಕೊಂಡಾಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಅವಳ ಬೌಲಿಂಗ್ ಶೈಲಿ ಕ್ರಿಕೆಟ್‌ಪ್ರಿಯರನ್ನು ಅವಳ ಅಭಿಮಾನಿಗಳಾಗುವಂತೆ ಮಾಡಿದೆ.

ಸೋಜಿಗವೆಂದರೆ, ಒಂದು ಟ್ವೀಟ್ ಮೂಲಕ ತನ್ನನ್ನು ರಾತ್ರಿ ಬೆಳಗಾಗುವಷ್ಟರಲ್ಲಿ ಜಗದ್ವಿಖ್ಯಾತವಾಗುವಂತೆ ಮಾಡಿದ ಸಚಿನ್ ಯಾರು ಎಂಬುದೇ ಅವಳಿಗೆ ಗೊತ್ತಿಲ್ಲ. ಜೋಪಡಿಯಲ್ಲಿ ಟೀವಿ ಇಲ್ಲದಿರುವ ಕಾರಣ ಕ್ರಿಕೆಟ್ ಪಂದ್ಯವನ್ನೂ ಆಕೆ ವೀಕ್ಷಿಸಿಲ್ಲ. 'ನನ್ನನ್ನು ಎಲ್ಲರಿಗೂ ಪರಿಚಯಿಸಿದ ಆ ಹಿರಿಯರಿಗೆ ಧನ್ಯವಾದಗಳು' ಎಂದು ಪಾಲಕರು ಹೇಳಿಕೊಟ್ಟ ಮಾತನ್ನು ಕೇಳುಗರ ಮುಂದೆ ಒಪ್ಪಿಸುತ್ತಾಳೆ.

ಸುಶೀಲಾಳದ್ದು ಬುಡಕಟ್ಟು ಕುಟುಂಬ. ಅವಳ ಜೋಪಡಿಗೆ ಈಗ ತೆರಪಿಲ್ಲದಂತೆ ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು, ಕ್ರಿಕೆಟ್ ಕೋಚ್‌ಗಳು, ಕ್ಲಬ್‌ಗಳ ಸದಸ್ಯರು ಬರುತ್ತಿದ್ದಾರೆ. ಬಂದವರಿಗೆ ಏನು ಹೇಳಬೇಕು ಎಂದು ಸುಶೀಲಾ ಕ್ಷಣಹೊತ್ತು ಪದಗಳಿಗಾಗಿ ತಡಕಾಡುತ್ತಾಳೆ. ಫೋಟೊಗಳಿಗೆ ಪೋಸ್ ನೀಡಿ, ನಾಚಿಕೆಯಿಂದ ಮೈದಾನದತ್ತ ಓಡುತ್ತಾಳೆ. ಒಂದೊಮ್ಮೆ ಕೈಯಲ್ಲಿ ಚೆಂಡು ಹಿಡಿದು ಆಡಲು ನಿಂತಳೆಂದರೆ ಮುಗಿಯಿತು, ನಿರ್ಭೀತ, ಏಕಾಗ್ರಚಿತ್ತ ಆಟಗಾರ್ತಿಯಾಗಿ ಕಂಗೊಳಿಸುತ್ತಾಳೆ.

ಸುಶೀಲಾಳ ಸಹಪಾಠಿ ಆಶಾ, ಈಗ ಪ್ರಸಿದ್ಧವಾಗಿರುವ ತನ್ನ ಈ ಗೆಳತಿಯನ್ನು ವಿಕೆಟ್ ಮುಂದೆ ಎದುರಿಸುವುದು ಕಷ್ಟ ಎನ್ನುತ್ತಾಳೆ. 'ಅವಳ ಎಸೆತಗಳಲ್ಲಿ ಚೆಂಡು ಅನಿರೀಕ್ಷಿತವಾಗಿ ತಿರುವು ಪಡೆಯುತ್ತದೆ ಮತ್ತು ಅದು ವಿಕೆಟ್ ಅನ್ನು ಉರುಳಿಸುತ್ತದೆ. ಅವಳನ್ನು ಎದುರಿಸುವುದು ಸುಲಭವಲ್ಲ' ಎಂದು ಹೇಳುತ್ತಾಳೆ. ಸುಶೀಲಾಳ ತಾಯಿ ಶಾಂತಿಬಾಯಿ ಅವರಿಗೆ, ತಮ್ಮ ಮಗಳು ಕ್ರಿಕೆಟ್‌ನಲ್ಲಿ ಗಮನಸೆಳೆದಿರುವುದು ತೃಪ್ತಿ ತಂದಿದೆ. 'ನನ್ನ ಬಹಳಷ್ಟು ಸಂಬಂಧಿಗಳು ಇಂತಹ ಆಟ ಬೇಡ, ಅದು ಹೆಣ್ಣುಮಕ್ಕಳಿಗಲ್ಲ, ಬಿಡಿಸಿಬಿಡು' ಎಂದು ಸಲಹೆ ನೀಡುತ್ತಿದ್ದಾರೆ. ಆದರೆ, ಅವಳಿಗೆ ನಾನು ಎಲ್ಲ ರೀತಿಯಿಂದ ಬೆಂಬಲ ನೀಡುವೆ. ಯಾರ ಸಲಹೆಗಳಿಗೂ ಕಿವಿಗೊಡುವುದಿಲ್ಲ' ಎನ್ನುತ್ತಾರೆ.

ಸುಶೀಲಾಳಲ್ಲಿ ಈ ಪಾಟಿ ಕ್ರಿಕೆಟ್ ಆಸಕ್ತಿ ಮೂಡಿದ್ದು ಹೇಗೆ? ಧರಿಯಾವಾಡ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಈಶ್ವರಲಾಲ್ ಮೀನಾ ಈ ಪ್ರಶ್ನೆಗೆ ಉತ್ತರಿಸುತ್ತಾರೆ. 'ಈ ಊರಿನಲ್ಲಿ ಮಕ್ಕಳನ್ನು ಶಾಲೆಗೆ ಕರೆತರುವುದು, ಶಾಲೆಯಲ್ಲೇ ಉಳಿಯುವಂತೆ ಮಾಡುವುದು ಅಷ್ಟು ಸುಲಭವಲ್ಲ. ಅವರನ್ನು ಶಾಲೆಯತ್ತ ಸೆಳೆಯುವಂತೆ ಮಾಡಲು ಕ್ರಿಕೆಟ್ ಆಟದ ತರಬೇತಿ ಆರಂಭಿಸಿದೆ. ವಾಸ್ತವವಾಗಿ ನಾನೂ ಕ್ರಿಕೆಟ್ ಕೋಚಿಂಗ್ ಪಡೆದವನೇನಲ್ಲ. ಯೂಟ್ಯೂಬ್‌ನಲ್ಲಿ ನೋಡಿಕೊಂಡು ಮಕ್ಕಳಿಗೆ ತಂತ್ರಗಾರಿಕೆ ಹೇಳಿಕೊಡುತ್ತೇನೆ' ಎಂದು ಅವರು ವಿವರಿಸುತ್ತಾರೆ. ರಾಜಸ್ಥಾನದ ಈ ಗ್ರಾಮೀಣ ಪ್ರತಿಭೆಗಳ ಯಶೋಗಾಥೆ ಬೇರೆಯವರಿಗೂ ಮುಟ್ಟಬೇಕು ಎಂದು ಸಾಮಾಜಿಕ ಜಾಲತಾಣದಲ್ಲಿ ಖಾತೆ ತೆರೆದ ಈಶ್ವರಲಾಲ್, ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ ಮಕ್ಕಳ ಆಟದ ತುಣುಕುಗಳನ್ನು ಅದರಲ್ಲಿ ಹಾಕುತ್ತಾ ಹೋಗಿದ್ದರು. ಸುಶೀಲಾಳ ಆಟದ ನೋಟ ಶೇರ್ ಆಗಿ ಆಗಿ ಸಚಿನ್ ಅವರನ್ನೂ ತಲುಪಿತು.

ಸುಶೀಲಾ ಇಷ್ಟೊಂದು ಫೇಮಸ್ ಆಗಿ ಮಿಂಚುತ್ತಿದ್ದರೂ ಅವಳ ಶಾಲೆಯು ಯಾವುದೇ ಮೌಲಸೌಕರ್ಯಗಳಿಲ್ಲದೆ ದಯನೀಯ ಸ್ಥಿತಿಯಲ್ಲಿದೆ. ವಾಸಕ್ಕೊಂದು ಸೂಕ್ತ ಮನೆಯೂ ಇಲ್ಲದೆ ಜೋಪಡಿಯೇ ಅವಳ ಕುಟುಂಬ ನೆಲೆಯಾಗಿದೆ. ರಾಜಕಾರಣಿಗಳು, ಅಧಿಕಾರಿಗಳು ಜೋಪಡಿ ಬಾಗಿಲಿನವರೆಗೆ ಬಂದು ಹಲವು ಭರವಸೆ ನೀಡಿದ್ದರೂ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಅರಣ್ಯ ಇಲಾಖೆಯು ಇಲ್ಲಿನ ಮಕ್ಕಳಿಗೆ ಒಂದು ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲು ಬೇಕಾದ ಭೂಮಿ ನೀಡಲು ಮನಸ್ಸು ಮಾಡಿದೆ. ಅಧಿಕಾರಿಗಳು ಭೂಮಿಯ ಸಮೀಕ್ಷೆ ಮಾಡಿಕೊಂಡು ಹೋಗಿದ್ದಾರೆ. ಮುಂದೇನು ಆಗುವುದೋ ಗೊತ್ತಿಲ್ಲ ಎಂದು ಈಶ್ವರಲಾಲ್ ಹೇಳುತ್ತಾರೆ.

ಸುಶೀಲಾ, ಒಬ್ಬ ಬೌಲರ್ ಎನ್ನುವುದನ್ನೂ ಮರೆತು ನೂರಾರು ಸಂಖ್ಯೆಯಲ್ಲಿ ಜನ ಬ್ಯಾಟ್‌ಗಳನ್ನು ಕೊಡುಗೆಯಾಗಿ ಕೊಡುತ್ತಿದ್ದಾರೆ. ಅವಳ ಸಮರ್ಪಕ ಅಭ್ಯಾಸಕ್ಕೆ ಸೂಕ್ತವಾದುದೊಂದು ಚೆಂಡು ಬೇಕು ಎಂದು ಅವಳ ಶಿಕ್ಷಕರು ಅಪೇಕ್ಷಿಸುತ್ತಾರೆ.

'ಸಚಿನ್, ಅವಳ ಪ್ರತಿಭೆಯನ್ನು ಸರಿಯಾಗಿ ಗುರುತಿಸಿದ್ದಾರೆ. ಆಕೆಯ ಶೈಲಿ ಸಹಜವಾಗಿದೆ ಮತ್ತು ಪ್ರಭಾವಶಾಲಿಯಾಗಿದೆ. ಬಹಳಷ್ಟು ಭರವಸೆ ಮೂಡಿಸಿರುವ ಬಾಲೆ ಆಕೆ' ಎಂದು ಜಹೀರ್ ಖಾನ್ ಕೂಡ ಕೊಂಡಾಡಿದ್ದಾರೆ. ಅವಳ, ಅವಳಂತಹ ಮಕ್ಕಳ ಭವಿಷ್ಯ ರೂಪಿಸಲು ದಿಗ್ಗಜರು ಕೈಜೋಡಿಸಿದ್ದಾದರೆ ಭಾರತೀಯ ಮಹಿಳಾ ಕ್ರಿಕೆಟ್‌ನ ಹಲವು ಪ್ರತಿಭೆಗಳು ಧರಿಯಾವಾಡದಲ್ಲಿ ಅರಳಲಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65